## ವಾರ್ತಾ ವಿಶ್ಲೇಷಣೆ

### ಸಸ್ಯಾಹಾರದ ಸುಖ್ಯಾತಿ

**ಅನೇಕ ದೋಷದುಷ್ಟಸ್ಯ ದೇಹಸ್ಯೈಕೋ ಮಹಾನ್ ಗುಣಃ |**
**ಯೋ ಯಥಾಽಯಂ ಪ್ರವರ್ತಂತೇ**
**ತಂ ತಥಾ ಹ್ಯನುವರ್ತತೇ ||**

"ಈ ದೇಹವು ಅನೇಕ ದೋಷಗಳಿಂದ ದುಷ್ಟವಾಗಿದ್ದರೂ ಇದರಲ್ಲಿ ಮಹತ್ವದ ಗುಣ ಇದೆ. ಅದಾವುದೆಂದರೆ, ಯಾರು ಇದನ್ನು ಹೇಗೆ ನಡೆಸುತ್ತಾರೆಯೋ ಅವರನ್ನು ಇದು ಹಾಗೆಯೇ ಅನುಸರಿಸುತ್ತದೆ."

ದೇಹ ಯಾವುದಕ್ಕೆ ಬೇಕಾದರೂ ಹೊಂದಿಕೊಳ್ಳುತ್ತದೆ. ಯಾವುದೇ ವಾತಾವರಣಕ್ಕೆ ಬೇಕಾದರೂ ಹೊಂದಿಕೊಳ್ಳುತ್ತದೆ. ಕಡಿಮೆ ಆಹಾರಕ್ಕೂ ಹೊಂದಿಕೊಳ್ಳುತ್ತದೆ, ಜಾಸ್ತಿ ಆಹಾರಕ್ಕೂ ಹೊಂದಿಕೊಳ್ಳುತ್ತದೆ. ಯಾವುದೇ ಬಗೆಯ ಆಹಾರಕ್ಕೂ ಹೊಂದಿಕೊಳ್ಳುತ್ತದೆ. ದೇಹದ ಈ ಹೊಂದಾಣಿಕೆಯ ಶಕ್ತಿ ಅತ್ಯಂತ ವಿಶಿಷ್ಟವಾದುದು. ನಾವು ಕೆಲವು ವೇಳೆ ಇದರ ದುರ್ಬಳಕೆ ಮಾಡಿಕೊಂಡು ನಮಗೆ ನಾವೇ ಕಷ್ಟವನ್ನು ತಂದುಕೊಳ್ಳುತ್ತೇವೆ.

ದೇಹಕ್ಕೆ ಸಸ್ಯಾಹಾರವನ್ನೂ ಕೊಡಬಹುದು ಮಾಂಸಾ ಹಾರವನ್ನೂ ಕೊಡಬಹುದು. ಸಸ್ಯಾಹಾರಿಗಳು ಮಾಂಸಾಹಾರಿಗಳಾಗಬಹುದು, ಮಾಂಸಾಹಾರಿಗಳು ಸಸ್ಯಾಹಾರಿಗಳಾಗಬಹುದು. ಇತ್ತೀಚಿನ ದಿನಗಳಲ್ಲಿ ಪ್ರಾಣಿಗಳ ಅದೃಷ್ಟ ಚೆನ್ನಾಗಿರುವಂತೆ ಕಂಡುಬರುತ್ತಿದೆ. ಏಕೆಂದರೆ ಮಾನವರು, ವಿಶೇಷವಾಗಿ ಅಮೆರಿಕನರು ಹೆಚ್ಚು ಹೆಚ್ಚು ಸಸ್ಯಾಹಾರಿಗಳಾಗುತ್ತಿದ್ದಾರಂತೆ. ಇತ್ತೀಚಿಗಿನ ಒಂದು ಅಭಿಪ್ರಾಯ ಸಂಗ್ರಹಣೆಯ ಪ್ರಕಾರ ೧೦ ಮಿಲಿಯನ್ ಅಮೆರಿಕನರು ತಮ್ಮನ್ನು ಸಸ್ಯಾಹಾರಿಗಳೆಂದು ಪರಿಗಣಿಸುತ್ತಾರಂತೆ. ವಿಶೇಷವಾಗಿ ಮಕ್ಕಳಲ್ಲಿ ಮತ್ತು ಯುವಕರಲ್ಲಿ ಸಸ್ಯಾಹಾರದ ಒಲವು ಅಧಿಕವಾಗುತ್ತಿದೆಯಂತೆ. ಪ್ರಾಣಿದಯೆ ಮತ್ತು ಆರೋಗ್ಯ ದೃಷ್ಟಿ ಈ ಬದಲಾದ ಅಭಿರುಚಿಗೆ ಕಾರಣಗಳೆಂದು ಹೇಳಲಾಗಿದೆ.

ಮನುಷ್ಯರನ್ನೂ ಪ್ರಾಣಿಸಮಾನವಾಗಿ ಪರಿಗಣಿಸುವ ಕಾಲದಿಂದ ಪ್ರಾಣಿಗಳನ್ನೂ ಮಾನವೀಯ ದೃಷ್ಟಿಯಿಂದ ನೋಡುವ ದೃಷ್ಟಿ ನಿಜವಾಗಿಯೂ ವಿಕಾಸದ ಚಿಹ್ನೆಯೇ. ಆದರೆ ಕೆಲವು ಧಾರ್ಮಿಕ ವ್ಯಕ್ತಿಗಳಂತೆ ಪ್ರಾಣಿದಯೆ ತೋರಿಸಿ ಮನುಷ್ಯನನ್ನು ಕ್ರೂರವಾಗಿ ನಡೆಸಿಕೊಳ್ಳುವುದು ಆಶಾದಾಯಕ ಸಂಗತಿಯಲ್ಲ.

ಮನುಷ್ಯ ಸಸ್ಯಾಹಾರಿಯಾಗಿ ದನ ಕುರಿಗಳಂತಾಗುತ್ತಾನೊ ಅಥವಾ ಆನೆ ಗೂಳಿಗಳಂತಾಗುತ್ತಾನೊ ನೋಡಬೇಕು. ❄

### ಮಾನವಕೋಟಿಯನ್ನು ಉಳಿಸಿ

"ಅಭಿನಿವೇಶ" ಎಂದರೆ ತಾನು ಇರಬೇಕು, ಇಲ್ಲವಾಗಬಾರದು ಎಂಬ ತೀವ್ರ ಹಂಬಲ. ವೈಯಕ್ತಿಕ ಅಭಿನಿವೇಶ ಇರುವಂತೆ ಜನಾಂಗೀಯ ಅಭಿನಿವೇಶವೂ ಇರುತ್ತದೆ. ಇದಕ್ಕಾಗಿಯೆ ಕೆಲವು ಜನಾಂಗಗಳು ತಮ್ಮ ಉಳಿಯುವಿಕೆಗಾಗಿ ಹೋರಾಟ ನಡೆಸುತ್ತವೆ. ಈ ಹೋರಾಟದಲ್ಲಿ ಅನೇಕ ದುರ್ಬಲ ಜನಾಂಗಗಳು ನಾಶವಾಗುತ್ತವೆ. ಇದೇ ರೀತಿ ಒಂದು ಆರ್ಥಿಕ ಶಕ್ತಿಯಾಗಿ ಉಳಿಯುವ ತುಡಿತವು ವ್ಯಕ್ತಿಯಲ್ಲಿಯೂ ದೇಶದಲ್ಲಿಯೂ ಇರುತ್ತದೆ. ಆರ್ಥಿಕ ಹಿರಿಮೆಯನ್ನು ಪಡೆಯಲು ದೇಶಗಳು ಹೋರಾಡುತ್ತವೆ. ಈ ಹೋರಾಟ ಜನಾಂಗೀಯ ಹೋರಾಟದಂತೆ ರಕ್ತಪಾತದಿಂದ ಕೂಡಿರುವುದಿಲ್ಲ, ಆದರೆ ಇದರಿಂದ ಮಹಾ ಆರ್ಥಿಕ ಉತ್ಪಾತವೇ ಉಂಟಾಗುತ್ತದೆ. ಬಡದೇಶಗಳು ಮತ್ತೂ ಬಡವಾಗುತ್ತವೆ. ಈ ಆರ್ಥಿಕ ಶೋಷಣೆ ತುಂಬ ಉದಾತ್ತ ಧ್ಯೇಯಗಳ ಹೆಸರಿನಲ್ಲಿ, ಜಾಗತೀಕರಣವೆಂಬ ಕುಂಟುನೆವದ ಮೂಲಕ ನಡೆಯುತ್ತದೆ.

ಮಾರ್ಚ್ ೨೧, ೨೦೦೨ರಂದು ಮೆಕ್ಸಿಕೊದಲ್ಲಿ ನಡೆದ International Conference on Financing for Development ನಲ್ಲಿ ಕ್ಯೂಬಾದ ಅಧ್ಯಕ್ಷ ಫೀಡಲ್ ಕ್ಯಾಸ್ಟ್ರೋ ಮಾತನಾಡುತ್ತ ಹೇಳಿದರು, "ಈಗ ಅಸ್ತಿತ್ವದಲ್ಲಿರುವ ಜಾಗತಿಕ ಅರ್ಥ ವ್ಯವಸ್ಥೆಯಿಂದ ಹಿಂದೆಂದಿಗಿಂತಲೂ ಆರ್ಥಿಕ ಲೂಟಿ ಮತ್ತು ಶೋಷಣೆ ನಡೆಯುತ್ತಿದೆ... ಇಂದಿನ ಜಾಗತಿಕ ಆರ್ಥಿಕತೆಯು ಒಂದು ಬೃಹತ್ ಜೂಜಾಟವಾಗಿದೆ," ಎಂದು. ಜಗತ್ತಿನ ಜನ ಸಂದಣಿಯ ಶೇ.೭೫ ಭಾಗ ಅನಭಿವೃದ್ಧ ಸ್ಥಿತಿಯಲ್ಲಿಯೆ ಇದ್ದಾರಂತೆ ಮತ್ತು ೧.೨ ಬಿಲಿಯನ್ ಜನರು ತೀವ್ರ ಬಡತನದಿಂದ ನರಳುತ್ತಿದ್ದಾರಂತೆ. ಬಡವ ಬಲ್ಲಿದರ ಅಂತರ ದಿನದಿನಕ್ಕೂ ಅಧಿಕವಾಗುತ್ತಿದೆ. ೧೯೬೦ರಲ್ಲಿ ಶ್ರೀಮಂತತಮ ರಾಷ್ಟ್ರದ ವರಮಾನ ಬಡತಮ ರಾಷ್ಟ್ರದಕ್ಕಿಂತ ೩೭ ಪಟ್ಟು ಜಾಸ್ತಿ ಇದ್ದದ್ದು ಈಗ ಅದು ೭೪ಪಟ್ಟು ಅಧಿಕವಾಗಿದೆ. ಜಗತ್ತಿನ ಮೂವರು ಅತಿ ಶ್ರೀಮಂತ ವ್ಯಕ್ತಿಗಳ ಆಸ್ತಿ ೪೮ ಅತ್ಯಂತ ಬಡದೇಶಗಳ GNPಗೆ ಸಮಾನವಂತೆ! ೨೦೦೧ರಲ್ಲಿ ಜಗತ್ತಿನಲ್ಲಿ ಹಸಿವಿನಿಂದ ನರಳುತ್ತಿದ್ದವರ ಸಂಖ್ಯೆ ೮೨೬ ಮಿಲಿಯನ್! ಎಂಥ ವಿಪರ್ಯಾಸ! ಆಧುನಿಕ ನಾಗರಿಕತೆ, ಮಾನವ ಹಕ್ಕುಗಳು ಮುಂತಾದ ಎಷ್ಟೋ ಪ್ರಗತಿಪರ ವಿಷಯಗಳನ್ನು ನಾವು ಮಾತನಾಡಿದರೂ ಎಷ್ಟೊಂದು ಅನಾಗರಿಕ ಸ್ಥಿತಿಯಲ್ಲಿದ್ದೇವೆ! ಮಾನವ ವಿಕಾಸದ ಮುನ್ನಡೆ ನಿಜವೆ? ಕೆಲವೆ ವ್ಯಕ್ತಿಗಳು ವಿಕಾಸದಲ್ಲಿ ಅತ್ಯಂತ ಮುನ್ನಡೆಯನ್ನು ಸಾಧಿಸುತ್ತಾರೆ. ಅಂತಹ ವ್ಯಕ್ತಿಗಳು ಹಿಂದೆಯೂ ಇದ್ದರು, ಈಗಲೂ ಇದ್ದಾರೆ. ❄